[Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF <u>CIVIL JUDGE & J.M.F.C., KARKALA.</u>**

**OS No. 145-2022**

**..................................................Vs...................................**

ಸಾಕ್ಷಿದಾರನ ಹೆಸರು ಃ ಡಾ. ಬಾಲಕೃಷ್ಣ ರಾವ್

ತಂದೆಯ ಹೆಸರುಃ ದೇವ ರಾವ್ ಪಿ.ಡಬ್ಲ್ಯೂಃ 2

ಪ್ರಾಯ ಃ 54 ವರ್ಷ

ಉದ್ಯೋಗ ಃ ವೈದ್ಯಾಧಿಕಾರಿ, ಬೆಳ್ಮಣ್

ವಾಸ ಃ ಬೆಳ್ಮಣ್

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 26-03-2025

<u>ಮುಖ್ಯ ವಿಚಾರಣೆಃ ಹೆಚ್ ಎಸ್ ಎಮ್ ವಕೀಲರಿಂದಃ</u>

ನಾನು ಬೆಳ್ಮಣ್ ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ ನಾಲ್ಕುವರೆ ವರ್ಷಗಳಿಂದ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಬೆಳ್ಮಣ್ ಗ್ರಾಮದ ಶಶಿಧರ್ ಶೆಟ್ಟಿ ಎಂಬುವವರು ನಡೆಸುತ್ತಿರುವ ಕೋಳಿ ಫಾರಂನಿಂದ ನನಗೆ ತೊಂದರೆ ಉಂಟಾಗುತ್ತಿದೆ ಎಂದು ಬೆಳ್ಮಣ್ ಗ್ರಾಮದ ರಮೇಶ್ ಶೆಟ್ಟಿ ಎಂಬುವವರು ನೀಡಿದ ದೂರಿನ ಮೇರೆಗೆ ಮಾನ್ಯ ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಆದೇಶದ ಮೇರೆಗೆ ನಾನು ಶಶಿಧರ್ ಶೆಟ್ಟಿರವರ ಕೋಳಿ ಫಾರಂ ನ ಪರಿಶೀಲನೆ ಮಾಡಿರುತ್ತೇನೆ. ಸದರಿ ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರರು ನನಗೆ ನೀಡಿದ ದಿಃ 16-03-2022 ರ ಅಧಿಕೃತ ಜ್ಞಾಪನ ಪತ್ರವನ್ನು ನ್ಯಾಯಾಲಯಕ್ಕೆ ತಂದಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಶಶಿಧರ್ ಶೆಟ್ಟಿರವರ ಕೋಳಿ ಫಾರಂ ಅನ್ನು ದಿಃ 19-03-2022 ರಲ್ಲಿ ಪರಿಶೀಲನೆ ನಡೆಸಿ ವರದಿ ತಯಾರಿಸಿರುತ್ತೇನೆ. ಸದರಿ ವರದಿಯನ್ನು ಬೆಳ್ಮಣ್ ಗ್ರಾಮ ಪಂಚಾಯತ್ ನ ಪಂಚಾಯತ್ ಅಭಿವೃದಿ ಅಧಿಕಾರಿಗೆ ಹಾಗೂ ಅದರ ಪ್ರತಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು

ನ್ಯಾಯಾಲಯಕ್ಕೆ ತಂದಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಪರಿಶೀಲನೆ ಮಾಡುವಾಗ ರಮೇಶ್ ಶೆಟ್ಟಿ ಶಶಿಧರ್ ಶೆಟ್ಟಿ ಹಾಜರಿದ್ದರು. ಸ್ಥಳ ಪರಿಶೀಲನೆ ವರದಿಗೆ ಕರಡು ನಕ್ಷೆಯನ್ನು ತಯಾರಿಸಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಐ ಆರ್ ಬಿ ವಕೀಲರಿಂದಃ

ಶಶಿಧರ್ ಶೆಟ್ಟಿ ರವರು ನಡೆಸುತ್ತಿರುವ ಕೋಳಿ ಫಾರಂ ಮುಖ್ಯ ರಸ್ತೆಯಿಂದ ಒಂದೂವರೆ ಕಿ ಮೀ ದೂರದಲ್ಲಿ ಇದೆ. ಕೋಳಿ ಫಾರಂ ಗೆ ಎರಡು ಸಲ ಭೇಟಿ ನೀಡಿರುತ್ತೇನೆ. ಕೋಳಿ ಫಾರಂಗೆ ಹೋಗುವ ಪೂರ್ವದಲ್ಲಿ ರಮೇಶ್ ಶೆಟ್ಟಿ ಹಾಗೂ ಶಶಿಧರ್ ಶೆಟ್ಟಿ ರವರಿಗೆ ನೋಟಿಸು ನೀಡಿರುವುದಿಲ್ಲ. ಸ್ಥಳದಲ್ಲಿ ಯಾವುದೇ ಮಹಜರು ಮಾಡಿರುವುದಿಲ್ಲ. ಕೃಷ್ಣಾನಂದ ಶೆಟ್ಟಿ ತಾಲೂಕು ವೈದ್ಯಾಧಿಕಾರಿಯಾಗಿದ್ದು, ನನ್ನ ಮೇಲಾಧಿಕಾರಿಯವರಾಗಿರುತ್ತಾರೆ. ಪಶುಪಾಲನ ಇಲಾಖೆಯ ಸಹಾಯಕ ನಿರ್ದೇಶಕರು ನನ್ನ ಜೊತೆ ಇದ್ದ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಕೋಳಿ ಫಾರಂ ಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನನಗಿಂತ ಹೆಚ್ಚಾಗಿ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಗೊತ್ತಿರುತ್ತದೆ ಎಂದರೆ ಸರಿ. ತಾಲೂಕು ವೈದ್ಯಾಧಿಕಾರಿಯವರೊಂದಿಗೆ ಜುಲೈನಲ್ಲಿ ಕೋಳಿ ಫಾರಂಗೆ ಹೋಗಿರುತ್ತೇನೆ. ನಾನು ಮಾರ್ಚ್ ತಿಂಗಳಲ್ಲಿ ಕೋಳಿ ಫಾರಂ ಗೆ ಭೇಟಿ ನೀಡಿದಾಗ ಮಳೆಗಾಲವಾಗಿರುವುದಿಲ್ಲ. ಜುಲೈ ತಿಂಗಳಿನಲ್ಲಿ ಮಳೆಗಾಲವಾಗಿರುತ್ತದೆ. ದ್ರವತಾಜ್ಯ ಹೆಚ್ಚಾಗಿ ಮಳೆಗಾಲದಲ್ಲಿ ಉತ್ಪತಿಯಾಗುತ್ತದೆ ಎಂದರೆ ಸರಿಯಲ್ಲ. ನನ್ನ ವರದಿ ಸರಿಯಾಗಿಲ್ಲ ಎಂದು ಹೇಳಿ ಶಶಿಧರ್ ಶೆಟ್ಟಿ ದೂರು ನೀಡಿರುತ್ತಾರೆ ಎಂದರೆ ಸರಿ. ರಮೇಶ್ ಶೆಟ್ಟಿಯವರ ಶೌಚಾಲಯವನ್ನು ನಾನು ನನ್ನ ನಕ್ಷೆಯಲ್ಲಿ ತೋರಿಸಿರುವುದಿಲ್ಲ. ವಾಸನೆ ಅಳತೆ ಮಾಡಲು ನಮ್ಮ ಬಳಿ ಯಾವುದೇ ಉಪಕರಣಗಳು ಇಲ್ಲ. ಈ ವಾಯುಮಾಲಿನ್ಯ ಮತ್ತು ಜಲಮಾಲಿನ್ಯದ ಬಗ್ಗೆ ಪರಿಸರ ಇಲಾಖೆಯಿಂದ ವರದಿಯನ್ನು ಪಡೆದುಕೊಳ್ಳಬೇಕು ಎಂದು ನಾನು ನನ್ನ ವರದಿಯಲ್ಲಿ ತಿಳಿಸಿರುತ್ತೇನೆ. ಶೆಡ್ ನಲ್ಲಿ ಎಷ್ಟು ಕೋಳಿಗಳು ಇದ್ದವು ಎಂದು ಅಳತೆ ಮಾಡಿರುವುದಿಲ್ಲ. ಬಾವಿ ಮತ್ತು ಮನೆಯ ನಡುವೆ ರಮೇಶ್ ಶೆಟ್ಟಿಯವರ ಶೌಚಲಾಯ ಇದೆ ಎಂದರೆ ಸರಿ. ಶ್ಯಾಲೋ ವಾಟರ್ ಎಂದು ತೋರಿಸಿದ ಜಾಗಕ್ಕೆ ಆವರಣ ಇರುವುದಿಲ್ಲ ಅದು ಒಂದು ನೀರಿನ ಗುಂಡಿ. ಅದಕ್ಕೆ ಕಲ್ಲನ್ನು ಸಹ ಕಟ್ಟಿರುವುದಿಲ್ಲ. ಅದು ಬಹಳ ಸಮಯದಿಂದ ಇರುವ ಹಾಗೇ

ಇದೆ. ಎಷ್ಟು ದೂರದಲ್ಲಿ ಬಾವಿ ಹಾಗೂ ಕೋಳಿ ಶೆಡ್ ಇರಬೇಕು ಎಂದು ನಿಯಮಗಳು ಇದೆ. ಅದನ್ನು ನನ್ನ ವರದಿಯಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ಕೋಳಿ ಫಾರಂ ಸುತ್ತ ತೋಟ ಇದೆ. ನಿಡಿ-1 ರಲ್ಲಿರುವ ಸತ್ತ ಕೋಳಿಗಳನ್ನು ಹೂಳುವ ಗುಂಡಿಯಾಗಿರುತ್ತದೆ. ನಿಡಿ-2 ಜೌಗು ಪ್ರದೇಶವಾಗಿರುತ್ತದೆ. ನಿಡಿ-3 ಕೋಳಿ ಫಾರಂ ಆಗಿರುತ್ತದೆ. ನಿಡಿ-5 ತೋಟ ಇರುವ ಸ್ಥಳ. ನಾನು ಪರಿಶೀಲನೆ ಮಾಡಿದ ಸಮಯದಲ್ಲಿ ಯಾವುದೇ ನೀರು ಕಲುಷಿತವಾಗಿರುವುದಿಲ್ಲ. ಜುಲೈ ನಲ್ಲಿ ಹೋದಾಗ ಕಲುಷಿತವಾದ ಬಗ್ಗೆ ನಾನು ನೋಡಿಲ್ಲ. ಕೃಷ್ಣನಂದ ಶೆಟ್ಟಿಯವರು ನೀಡಿದ ವರದಿ ಸರಿ ಇರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಬಿಳಿ ಬಣ್ಣದ ಫೌಡರ್ ಅನ್ನು ಹಾಕಿದ್ದರು ಅದು ಏನೂ ಎಂದು ಗೊತ್ತಿರುವುದಿಲ್ಲ. ಕೋಳಿ ಗೊಬ್ಬರವನ್ನು ಸಂಗ್ರಹ ಮಾಡುವ ಶೆಡ್ ಒಣ ಪ್ರದೇಶದಲ್ಲಿ ಇದೆ. ಕೋಳಿ ಫಾರಂ ಶಶಿಧರ್ ಶೆಟ್ಟಿ ರವರ ಸ್ವಂತ ಜಾಗದಲ್ಲಿ ಇರುತ್ತದೆ. ಮೇರಿ ನೊರೋನ ರವರ ಮನೆ ಕೋಳಿ ಫಾರಂ ನಿಂದ 50 ಮೀ ದೂರದಲ್ಲಿ ಇದೆ. ನನ್ನ ವರದಿಯಲ್ಲಿ ದ್ರವ ತಾಜ್ಯ ಇತ್ತು ಎಂದು ಕಾಣಿಸಿರವುದಿಲ್ಲ ಎಂದರೆ ಸರಿಯಲ್ಲ. ನಾನು ರಮೇಶ್ ಶೆಟ್ಟಿರವರು ಹೇಳಿದಂತೆ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ವರದಿಗೆ ಶಶಿಧರ್ ಶೆಟ್ಟಿ ದೂರು ದಾಖಲಿಸಿದ್ದು ನಂತರ ಪಶುಪಾಲನ ಇಲಾಖೆಯ ಸಹಾಯಕ ನಿರ್ದೇಶಕರು, ತಾಲೂಕು ಆರೋಗ್ಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸರಿಯಾದ ವರದಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ